ಕ್ರಿಮಿನಲ್ ಕೇಸ್ ನಂ.102/2020

ಪ್ರಾ.ಸಾ.ಃ 1

ಸಾಕ್ಷಿಗೆ ದಿನಾಂಕ ಃ-13-07-2022 ರಂದು ಪ್ರಮಾಣಿಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಶ್ರೀ ಎಸ್ ಬಿ ಪಿ ವಕೀಲರಿಂದ

3. ನಾನು ರೀಯಲ್ ಎಸ್ಟೇಟ್ ಏಜೆಂಟ ಎಂದು ತೋರಿಸಲು ದಾಖಲಾತಿ ಇಲ್ಲ. ನಾನು ತೆರಿಗೆ ಪಾವತಿ ಮಾಡುವುದಿಲ್ಲ. ನನ್ನದು ಪ್ಯಾನ ಕಾರ್ಡ ಇದೆ. ನಾನು ರಾಜು ಮತ್ತು ದಸ್ತಗೀರಸಾಬ ಮರ್ತುರ ಇವರ ಸಮಕ್ಷಮ ಹಣ ನೀಡಿರುತ್ತೇನೆ. ಹಣವನ್ನು ಮನೆಯ ಮುಂದೆ ರಸ್ತೆಯ ಮೇಲೆ ನೀಡಿರುತ್ತೇನೆ. ಸದರಿ ಹಣವನ್ನು ನಾನು ಬ್ಯಾಂಕನಿಂದ ತಂದಿದ್ದು ಕೊಟ್ಟೆದ್ದೆ ಆರೋಪಿ ಹಣ ಎಣಿಸಿಕೊಂಡಿರುತ್ತಾನೆ. 500 ರೂಪಾಯಿ ಮುಖ ಬೆಲೆಯ 10 ಬಂಡಲ್‌ಗಳಿದ್ದವು.

4. ನಾನು ದಿನಾಂಕ 13 ರಂದು ಹಣ ನೀಡಿದ್ದೆ ಆತ ದಿನಾಂಕ 20 ರಂದು ಚೆಕ್ ನೀಡಿರುತ್ತಾನೆ. ನಾನು ಹಣ ಕೇಳಿದಾಗ ಆತ ಚೆಕ್ ನನ್ನ ಅಂಗಡಿ ಬಂದು ನೀಡಿರುತ್ತಾನೆ. ದುಡ್ಡು ಕೊಟ್ಟ ನಂತರ ನಾನು ಆರೋಪಿಗೆ ಭೇಟಿ ಆದಾಗ ಹಣ ಮರಳಿಸಲು ಕೇಳಿಕೊಂಡು ಬಂದಿರುತ್ತೇನೆ. ದಿನಾಂಕ 15-16 ರಂದು ಹಣ ಮರಳಿಸಲು ನಾನು ಆರೋಪಿಗೆ ಕೇಳಿರುತ್ತೇನೆ. ಚೆಕ್ಕನ್ನು ನೀಡುವ ಸಮಯದಲ್ಲಿ ಬೇರೆ ಯಾರು ಇದ್ದಿರಲಿಲ್ಲ ಆತ ಮತ್ತು ನಾನು ಮಾತ್ರ ಇದ್ದೇವು. ಸಾಮಾನ್ಯವಾಗಿ ನನ್ನ ವ್ಯವಹಾರವನ್ನು ಎಲ್ಲ ಖಾತೆಯ ಮೂಲಕ ಮಾಡುತ್ತೇನೆ. ಸದರಿ 5 ಲಕ್ಷ ರೂಪಾಯಿ ಹಣವನ್ನು ನನ್ನ ಖಾತೆಯಿಂದ ತೆಗೆದ ನಂತರ ಬಾಕಿ 2-3 ಲಕ್ಷ ಹಣ ಖಾತೆಯಲ್ಲಿ ಉಳಿದಿರಬಹುದು. 8 ಲಕ್ಷ ರೂಪಾಯಿ ಎಷ್ಟು ತಿಂಗಳವರೆಗೆ ಜಮೆ ಇತ್ತು ಎಂದರೆ ಖಾತೆ ನೋಡಿದರೆ ನಾನು ಹೇಳುತ್ತೇನೆ.

5. ಬ್ಯಾಂಕನಿಂದ ಒಂದೇ ದಿನಕ್ಕೆ 5 ಲಕ್ಷ ರೂಪಾಯಿ ಹಣವನ್ನು ತೆಗೆದು ಕೊಡುವದಿಲ್ಲ ಕೇವಲ 3 ಲಕ್ಷ ಹಣ ಮಾತ್ರ ಕೊಡುತ್ತಾರೆ ಎಂದರೆ ಸರಿಯಲ್ಲ. ನನಗೆ 5 ಲಕ್ಷ ರೂಪಾಯಿ ಹಣ ನೀಡಿರುತ್ತಾರೆ. ಆ ಕುರಿತು ನಾನು ನನ್ನ ಬ್ಯಾಂಕ ಪಾಸ್ ಪುಸ್ತಕ ಹಾಜರುಪಡಿಸಿರುತ್ತೇನೆ. ನಾನು ಕರ್ನಾಟಕ ಬ್ಯಾಂಕ ಹಣವನ್ನು ವಾಪಸ್ಸು ತೆಗೆದುಕೊಟ್ಟಿರುತ್ತೇನೆ. ಕರ್ನಾಟಕ ಬ್ಯಾಂಕನಲ್ಲಿ ಆರೋಪಿಯ ಖಾತೆ ಇದೆ ಆದರೂ ನಗದಾಗಿ ಕೊಡಲು ಏನು ಕಾರಣ ಎಂದರೆ ಸಾಕ್ಷಿ ಆತನ ಖಾತೆ ಇದ್ದ ಬಗ್ಗೆ ಗೊತ್ತಿಲ್ಲ ಮತ್ತು ನಗದು ಹಣ ನೀಡಲು ವಿನಂತಿಸಿಕೊಂಡಿದ್ದ.

6. ನಿ.ಪಿ. 1 ರಲ್ಲಿ ದಿನಾಂಕ ಮತ್ತು ಆರೋಪಿತನ ಹೆಸರು ಮಸಿ ವ್ಯತ್ಯಾಸದಿಂದ ಕೂಡಿದೆ ಎಂದರೆ ನಿಜ. ಆದರೆ ಸಾಕ್ಷಿಯು ಆರೋಪಿತನ ಚೆಕ್ಕನ್ನುಬರೆದು ತಂದು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ನನಗೆ 5 ಲಕ್ಷ ರೂಪಾಯಿ ಹಣ ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೂ 5 ಲಕ್ಷ ರೂಪಾಯಿ ಹಣ ಬೇಕಾಗುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಬಾಲ್ಯ ಸ್ನೇಹಿತನ ಮತ್ತು ಜೊತೆಯಲ್ಲಿ ಓಡಾಟ ಮಾಡುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನೇರೆಯವರು ಆದರೆ 10 ರಿಂದ 15 ವರ್ಷಗಳಿಂದ ಪರಿಚಯ ಇದೆ.

7. ಆರೋಪಿಗೆ 1 ಲಕ್ಷ ಹಣದ ಅವಶ್ಯಕತೆ ಇದ್ದ ಕಾರಣ ನನ್ನಿಂದ ಸಾಲ ಪಡೆದು ಮರಳಿ ನೀಡಿರುತ್ತಾನೆ ಎಂದರೆ ಸರಿಯಲ್ಲ. ಮನಗೂಳಿ ಎಂಬುವವರು ಮಂತ್ರಿ ಇದ್ದಾಗ ನಾನು ಮತ್ತು ಆರೋಪಿ ಜೊತೆಯಲ್ಲಿ ತಿರುಗಾಡುತ್ತಿದ್ದೇವು ಎಂದರೆ ಸರಿಯಲ್ಲ. ಪಟ್ಟಣ ಪಂಚಾಯತಿ ಅಧಿಕಾರಿಯವರ ವರ್ಗಾವಣೆ ಸಂಬಂಧಿಸಿದಂತೆ ಒಂದು ಪ್ರಕರಣ ಆಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಪಟ್ಟಣ ಪಂಚಾಯತ ಅಧಿಕಾರಿಯಿಂದ ನಾನು 5 ಲಕ್ಷ ರೂಪಾಯಿ ಹಣ ಪಡೆದಿದ್ದೆ ಎಂದರೆ ಸರಿಯಲ್ಲ. ಆರೋಪಿ ರಾಜಕಾರಣೀಯ ಜೊತೆ ಒಳ್ಳೆಯ ಸಂಬಂಧ ಇರುವುದರಿಂದ ನಾನು ಆತನಿಗೆ ವರ್ಗಾವಣೆ ಮಾಡಲು ವಿನಂತಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

8. ಅದೇ ಕಾರಣಕ್ಕಾಗಿ ಆರೋಪಿ ಮಾತು ಕೇಳಿ ಮತ ಚಲಾವಣೆ ಮಾಡಿ ನಂತರ ನನ್ನ ಕೆಲಸ ಮಾಡಿ ಕೊಡದ ಕಾರಣ ಆರೋಪಿ ನನಗೆ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಿಕ್ಕ ಗುತ್ತಿಗೆ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗುತ್ತಿಗೆದಾರರ ಕೆಲಸಕ್ಕೆ ನಾನು ಮೆಲ್ವಿಚಾರಣೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನನ್ನ ಮತ್ತು ಆರೋಪಿಯ ಮಧ್ಯ ಹಲವಾರು ವ್ಯವಹಾರಗಳು ಇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಕೊಟ್ಟ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡು ರಾಜಕೀಯ ವೈಷಮ್ಯದಿಂದ ಈ ಸುಳ್ಳು ಪಿರ್ಯಾದಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ಬರೆದ ಎಲ್ಲ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ